**ದಿಃ 21.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ವಾದಿಯರ ಪರವಾಗಿಃ**

**12)** ಕರಾರು ಪತ್ರಕ್ಕೆ ಪ್ರತಿವಾದಿ ಪ್ರತಿಪುಟದಲ್ಲಿ ಸಹಿ ಮಾಡಿದ್ದಾರೆ, ಅವರ ಸಹಿಗಳನ್ನು ಗುರುತಿಸುತ್ತೇನೆ. ಪ್ರತಿವಾದಿಯ ಸಹಿಯನ್ನು ನಿ.ಪಿ-**1(**ಎ**)** ಇಂದ **1(**ಸಿ**)** ಎಂದು ಗುರುತಿಸಲಾಯಿತು. ಪ್ರತಿವಾದಿಯ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಟ್ಟಿದ್ದಾರೆ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಪ್ರತಿವಾದಿ ತನ್ನ ಹೆಬ್ಬೆಟ್ಟು ಮತ್ತು ಸಹಿಯನ್ನು ಹಾಕಿರುತ್ತಾರೆ. ಆ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಪ್ರತಿವಾದಿಯ ಸಹಿಯನ್ನು ನಿ.ಪಿ-**1(**ಡಿ**)** ಎಂದು ಗುರುತಿಸಲಾಯಿತು.

**13)** ಕರಾರು ಪತ್ರಕ್ಕೆ ನಾನು ಸಹ ಸಹಿ ಮಾಡಿದ್ದೇನೆ. ಸಾಕ್ಷಿಯು ಕರಾರು ಪತ್ರದಲ್ಲಿನ ತನ್ನ ಸಹಿಗಳನ್ನು ಗುರುತಿಸಿರುತ್ತಾರೆ. ವಾದಿಯ ಸಹಿಯನ್ನು ನಿ.ಪಿ-**1(**ಇ**)** ಇಂದ **1(**ಜಿ**)** ಎಂದು ಗುರುತಿಸಲಾಯಿತು. ನೊಂದಣಿ ಸಮಯದಲ್ಲಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿದ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ-**1(**ಹೆಚ್**)** ಎಂದು ಗುರುತಿಸಲಾಯಿತು. ಸಾಕ್ಷಿದಾರರಾಗಿ ಎಂ.ಡಿ.ಬಾರಂಗಿ ಮತ್ತು ಕುಂಕುಮಗಾರರವರು ಸಹಿ ಮಾಡಿದ್ದಾರೆ. ಅವರ ಸಹಿಗಳನ್ನು ಗುರುತಿಸುತ್ತೇನೆ. ಈ ಹಂತದಲ್ಲಿ ಶ್ರೀ.ಪಿ.ಬಿ.ಎಂ ವಕೀಲರು ತಕರಾರು ಮಾಡಿ, ಸಾಕ್ಷಿದಾರರು ಬದುಕಿದ್ದಾಗ ಅವರ ಸಹಿಗಳನ್ನು ಸಾಕ್ಷಿಯು ಗುರುತಿಸಲು ಬರುವದಿಲ್ಲ ಎಂದು ತಕರಾರು ಮಾಡಿರುತ್ತಾರೆ. ಸಂಪೂರ್ಣ ಸಾಕ್ಷ ಮತ್ತು ದಾಖಲೆಯನ್ನು ಪರಿಶೀಲಿಸಲಾಗಿ ವಾದಿ ಮತ್ತು ಪ್ರತಿವಾದಿ ಎದುರಿಗೆ ಬರೆದುಕೊಡುವ ಸಮಯದಲ್ಲಿ ಸಾಕ್ಷಿದಾರರು ಸಹ ಹಾಜರಿದ್ದು ಸಹಿ ಮಾಡಿರುತ್ತಾರೆ. ಸಾಕ್ಷಿದಾರರ ಸಹಿಗಳನ್ನು ವಾದಿಯು ಗುರುತಿಸಲು ಪ್ರಥಮ ಮತ್ತು ಪ್ರಮುಖ ಸಾಕ್ಷಿಯಾಗಿರುತ್ತಾರೆ. ಸಾಕ್ಷಿದಾರರು ಜೀವಂತವಿರುವದು ಅಥವಾ ಮೃತಪಟ್ಟಿರುವದು

ಸಾಕ್ಷಿದಾರರ ಸಹಿಯ ಗುರುತಿಸುವಿಕೆಗೆ ಯಾವುದೇ ಅಡ್ಡಿ ಇರುವದಿಲ್ಲ. ಆದ್ದರಿಂದ ವಕೀಲರ ತಕರಾರನ್ನು ತಳ್ಳಿಹಾಕಿ ಸಾಕ್ಷಿದಾರರ ಸಹಿಯನ್ನು ನಿ.ಪಿ-**1(ಐ)** ಮತ್ತು ನಿ.ಪಿ-**1(ಜೆ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಪಿ.ಬಿ.ಎಂ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.